**O.S .No. 146/2019 8 PW -1**

**ಸಾಕ್ಷಿಯನ್ನು ಕರೆಸಲಾಯಿತು ಪ್ರಮಾಣ ವಚನ ಮಾಡಿಸಲಾಯಿತು**

**ದಿ:10-07-2023**

ಮುಂದುವರೆದ ಪಾಟೀ ಸವಾಲುಃ ಶ್ರೀ ಎಸ್ ವಿ ಎಸ್ ವಕೀಲರಿಂದ

ನಾನು ಈ ದಾವಾದಲ್ಲಿ ಹಾಜರುಪಡಿಸಿದ ದಾಖಲಾತಿಗಳ ಬಗ್ಗೆ ತಿಳಿದುಕೊಂಡಿರುತ್ತೇನೆ. **2018** ರಲ್ಲಿ ಆನೆಗಳು ನಮ್ಮ ತೋಟದಲ್ಲಿ ನುಗ್ಗಿ ಬೇಲಿ ಮತ್ತು ಮರ ಗಿಡಗಳನ್ನು ತುಳಿದಿರುತ್ತವೆ ಆದರೆ ಯಾವ ದಿನಾಂಕ ಮತ್ತು ತಿಂಗಳು ಹೇಳಲು ಆಗುವುದಿಲ್ಲ. ಪ್ರತಿವಾದಿ ಯಾವ ತಾರೀಖು ಮತ್ತು ತಿಂಗಳಿನಲ್ಲಿ ನನಗೆ ತೊಂದರೆ ಕೊಟ್ಟಿರುತ್ತಾರೆ ಎಂದು ಹೇಳಲು ಆಗುವುದಿಲ್ಲ. ನನ್ನ ವಾದಪತ್ರದಲ್ಲಿ ನಾನು ಪ್ರತಿವಾದಿ ಯಾವ ತಾರೀಖಿನಂದು ತೊಂದರೆ ಕೊಟ್ಟಿರುತ್ತಾರೆ ಎಂದು ಬರೆಸಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಇತ್ತೀಚಿನ ಪ್ರತಿವಾದಿ ಜಮೀನಿನ ದಾಖಲಾತಿಗಳನ್ನು ನೋಡಿರುವುದಿಲ್ಲ. ಹುಲ್ಲಳ್ಳಿ ಗ್ರಾಮದ ಸ ನಂ **1/5** ಈಗ ನಿಶಾಂತ್ ರವರ ಹೆಸರಿನಲ್ಲಿ ಇದೆ ಎಂದರೆ ಸರಿ. ನಾನು ನ್ಯಾಯಾಲಯದ ನಿಯೋಗಿ ಸಲ್ಲಿಸಿದ ವರದಿಯನ್ನು ನೋಡಿ ತಿಳಿದುಕೊಂಡಿರುತ್ತೇನೆ. ಅಳತೆ ಮಾಡುವ ಕಾಲಕ್ಕೆ ನಾನು ಮತ್ತು ಪ್ರತಿವಾದಿ ಹೊರತುಪಡಿಸಿ ಬೇರೆ ಯಾರೂ ಇರಲಿಲ್ಲ. ಕಮೀಷನರ್ ವರದಿಗೆ ನಾನು ಸಹಿ ಮಾಡಿರುವುದಿಲ್ಲ. ನಾನು ಪ್ರತಿವಾದಿ ವಿರುದ್ಧ ಸುಳ್ಳು ದಾವಾ ಸಲ್ಲಿಸಿ ಅದಕ್ಕೆ ಪೂರಕವಾಗಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ : ಇಲ್ಲ.**

**ಉಕ್ತ ಲೇಖನದಂತೆ ಮುಕ್ತ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**

**ಓ ಹೆ ಕೇ ಸ ಇ**

ಸಿವಿಲ್ ನ್ಯಾಯಾಧೀಶರು,
ಸಕಲೇಶಪುರ